# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(5ಜಿ)ಪಿಆರ್/206/2019-20

ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 7/1/2020

## ಸುತ್ತೋಲೆ

ವಿಷಯ: ಖಾಯಂ ಗ್ರೂಪ್ ಡಿ ವೃಂದದ ನೌಕರರುಗಳ ಸೇವಾ ಪುಸ್ತಕಗಳನ್ನು ಅಪ್‌ಡೇಟ್ ಮಾಡುವ ಕುರಿತು.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವಾರು ಮಂದಿ ಖಾಯಂ ನಾಲ್ಕನೇ ದರ್ಜೆ ನೌಕರರುಗಳಿಗೆ (ಪೌರಕಾರ್ಮಿಕ, ಗ್ಯಾಂಗ್‌ಮೆನ್, ತೋಟಗಾರಿಕೆ ಮಾಲಿ, ಜವಾನರು, ಸ್ಯಾನಿಟರಿ ದಫೇದಾರ್ ಮತ್ತು ಇನ್ನಿತರೇ ಗ್ರೂಪ್ ಡಿ ವೃಂದದ ನೌಕರರುಗಳು) ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸಲು ಪ್ರಸ್ತಾವನೆಯನ್ನು ಸಲ್ಲಿಸದೇ ಇರುವುದು, ಕಾಲಕಾಲಕ್ಕೆ ವಾರ್ಷಿಕ ವೇತನ ಬಡ್ತಿ, ಕಾಲಮಿತಿ ವೇತನ ಬಡ್ತಿ, ಸ್ವಯಂಚಾಲಿತ ವಿಶೇಷ ಬಡ್ತಿ, ಅಧಿಕ ವೇತನ ಬಡ್ತಿಗಳನ್ನು ಮಂಜೂರು ಮಾಡದೇ ಇರುವುದು, ಸೇವಾ ಪುಸ್ತಕಗಳಲ್ಲಿ ಗಳಿಕೆ ರಜೆ ಮತ್ತು ಪರಿವರ್ತಿತ ರಜೆಗಳನ್ನು ನಮೂದಿಸದೇ ಇರುವುದು ಮತ್ತು ಸೇವಾ ಪುಸ್ತಕಗಳನ್ನು ಅಪ್‌ಡೇಟ್ ಮಾಡದೇ ಇರುವುದು ಹಾಗೂ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ಕಾಲಕಾಲಕ್ಕೆ ನೀಡಿರುವುದಿಲ್ಲ. ಇದರಿಂದಾಗಿ ನಾಲ್ಕನೇ ದರ್ಜೆ ನೌಕರರುಗಳು ಹಲವು ಸೇವಾ ಸವಲತ್ತುಗಳಿಂದ ವಂಚಿತರಾಗುತ್ತಿರುವ ಬಗ್ಗೆ ಹಲವಾರು ದೂರುಗಳು ಬಂದಿರುವುದನ್ನು ಗಮನಿಸಲಾಗಿರುತ್ತದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂರ್ವ, ರಾಜರಾಜೇಶ್ವರಿನಗರ, ಪಶ್ಚಿಮ ಮತ್ತು ದಾಸರಹಳ್ಳಿ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಡಿ ವೃಂದದ ನೌಕರರುಗಳಿಗೆ ಈ ಕೆಳಕಂಡ ಸೇವಾ ಸೌಲಭ್ಯಗಳನ್ನು ಸ್ಥಳದಲ್ಲಿಯೇ ಒದಗಿಸುವ ಸಂಬಂಧ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರ ನೇತೃತ್ವದಲ್ಲಿ ಪಾಲಿಕೆಯ ಕೇಂದ್ರ ಕಛೇರಿಯಲ್ಲಿರುವ ಡಾ|| ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಅದಾಲತ್ತನ್ನು ಹಮ್ಮಿಕೊಳ್ಳಲಾಗಿರುತ್ತದೆ.

1. ಸೇವಾಪುಸ್ತಕವನ್ನು ಅಪ್‌ಡೇಟ್ ಮಾಡುವ ಬಗ್ಗೆ.
2. ವಾರ್ಷಿಕ ವೇತನ ಬಡ್ತಿ ಮತ್ತು ಇತರೇ ವೇತನ ಬಡ್ತಿಗಳ ಬಗ್ಗೆ.
3. ಪರೀಕ್ಷಾರ್ಥ ಸೇವಾವಧಿ ಘೋಷಣೆ ಬಗ್ಗೆ.
4. ವೈದ್ಯಕೀಯ ವೆಚ್ಚ ಮರುಪಾವತಿ ಪ್ರಕರಣಗಳ ಬಗ್ಗೆ.
5. 4ನೇ ದರ್ಜೆ ನೌಕರರುಗಳ ಇತರೇ ವಿಷಯಗಳು

ಸೇವಾ ಸೌಲಭ್ಯಗಳನ್ನು ಸ್ಥಳದಲ್ಲಿಯೇ ಒದಗಿಸುವ ಸಂಬಂಧ ಅದಾಲತ್ತನ್ನು ಹಮ್ಮಿಕೊಂಡಿರುವ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ. | ಅದಾಲತ್ತು ನಡೆಸುವ ವಲಯ | ಅದಾಲತ್ತು ನಡೆಸುವ ದಿನಾಂಕ | ಸಮಯ |
|---|---|---|---|
| 1. | ಪೂರ್ವ ವಲಯ | 13-01-2020 | ಬೆಳಿಗ್ಗೆ 10.00 ಗಂಟೆಯಿಂದ 1.30 ಗಂಟೆಯವರೆಗೆ |
| 2. | ರಾಜರಾಜೇಶ್ವರಿನಗರ ವಲಯ | 13-01-2020 | ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ |

| | | | |
|---|---|---|---|
| 3. | ಪಶ್ಚಿಮ ವಲಯ | 14-01-2020 | ಬೆಳಿಗ್ಗೆ 10.00 ಗಂಟೆಯಿಂದ 1.30 ಗಂಟೆಯವರೆಗೆ |
| 4. | ದಾಸರಹಳ್ಳಿ ವಲಯ | 14-01-2020 | ಮಧ್ಯಾಹ್ನ 2.30 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ |

ಆದ್ದರಿಂದ, ಪೂರ್ವ, ರಾಜರಾಜೇಶ್ವರಿನಗರ, ಪಶ್ಚಿಮ ಮತ್ತು ದಾಸರಹಳ್ಳಿ ವಲಯಗಳ ಎಲ್ಲಾ ಬಟವಾಡೆ ಅಧಿಕಾರಿಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್ ಡಿ ವೃಂದದ ನೌಕರರುಗಳ ಸೇವಾ ಪುಸ್ತಕಗಳನ್ನು ನಿಯಮಾನುಸಾರ ಪರಿಶೀಲಿಸಿ ಅಪ್‌ಡೇಟ್ ಮಾಡಿ, ಪರೀಕ್ಷಾರ್ಥ ಸೇವಾವಧಿ ಘೋಷಿಸುವ ಬಗ್ಗೆ ಹಾಗೂ ಕಾಲಕಾಲಕ್ಕೆ ವಾರ್ಷಿಕ ವೇತನ ಬಡ್ತಿ, ಕಾಲಮಿತಿ ವೇತನ ಬಡ್ತಿ, ಸ್ವಯಂಚಾಲಿತ ವಿಶೇಷ ಬಡ್ತಿ, ಅಧಿಕ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಸಂಬಂಧ ಸ್ಪಷ್ಟವಾದ ಪ್ರಸ್ತಾವನೆಯೊಂದಿಗೆ ಅದಾಲತ್ತಿನಲ್ಲಿ ಅಪರ / ಜಂಟಿ ಆಯುಕ್ತರು (ಪೂರ್ವ / ರಾಜರಾಜೇಶ್ವರಿನಗರ / ಪಶ್ಚಿಮ / ದಾಸರಹಳ್ಳಿ), ಉಪ ನಿಯಂತ್ರಕರು (ಹಣಕಾಸು-ಪೂರ್ವ / ರಾಜರಾಜೇಶ್ವರಿನಗರ / ಪಶ್ಚಿಮ / ದಾಸರಹಳ್ಳಿ), ಸಂಬಂಧಪಟ್ಟ ಎಲ್ಲಾ ಬಟವಾಡೆ ಅಧಿಕಾರಿಗಳು ಮತ್ತು ಅಗತ್ಯ ಸಿಬ್ಬಂದಿಗಳೊಂದಿಗೆ ಕಡ್ಡಾಯವಾಗಿ ಹಾಜರಿರಲು ಸೂಚಿಸಿದೆ.

ಪೂರ್ವ, ರಾಜರಾಜೇಶ್ವರಿನಗರ, ಪಶ್ಚಿಮ ಮತ್ತು ದಾಸರಹಳ್ಳಿ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಡಿ ವೃಂದದ ನೌಕರರುಗಳಿಗೆ ಅದಾಲತ್ತಿನ ಬಗ್ಗೆ ಮಾಹಿತಿ ನೀಡುವುದು ಮತ್ತು ಅದಾಲತ್ತಿನಲ್ಲಿ ಗ್ರೂಪ್ ಡಿ ವೃಂದದ ನೌಕರರುಗಳು ಏನಾದರೂ ಕುಂದುಕೊರತೆಗಳು ಇದ್ದಲ್ಲಿ ಸದರಿ ಅದಾಲತ್ತಿಗೆ ಹಾಜರಾಗಿ ತಮ್ಮ ಅಹವಾಲುಗಳನ್ನು ಸಲ್ಲಿಸುವಂತೆ ಸುತ್ತೋಲೆ ಮುಖೇನ ತಿಳಿಸಲು ಸಂಬಂಧಪಟ್ಟ ವಲಯಗಳ ಅಪರ / ಜಂಟಿ ಆಯುಕ್ತರುಗಳಿಗೆ ಸೂಚಿಸಿದೆ.

ಮಾನ್ಯ ಆಯುಕ್ತರವರ ಆದೇಶದಂತೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು: ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.

: ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಕಾರ್ಯದರ್ಶಿ ರವರಿಗೆ ಕಳುಹಿಸಿದೆ.
: ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ವಿಶೇಷ ಆಯುಕ್ತರು (ಯೋಜನೆ/ಆಡಳಿತ/ಹಣಕಾಸು) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಕೌನ್ಸಿಲ್ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.
: ಸಂಬಂಧಪಟ್ಟ ಅಪರ / ಜಂಟಿ ಆಯುಕ್ತರು ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
: ಸಂಬಂಧಪಟ್ಟ ವಲಯಗಳ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಕಳುಹಿಸಿದೆ.
: ಮುಖ್ಯ ಲೆಕ್ಕಾಧಿಕಾರಿ / ಮುಖ್ಯ ಲೆಕ್ಕಪರಿಶೋಧಕರಿಗೆ ಕಳುಹಿಸಿದೆ.
: ಉಪ ನಿಯಂತ್ರಕರು (ಹಣಕಾಸು-ಕೇಂದ್ರ/ಪೂರ್ವ/ರಾಜರಾಜೇಶ್ವರಿನಗರ/ಪಶ್ಚಿಮ/ದಾಸರಹಳ್ಳಿ) ರವರುಗಳಿಗೆ ಕಳುಹಿಸಿದೆ.
: ಕಛೇರಿ ಪ್ರತಿ.